681 ಶ್ರೀ ಬಸವರಾಜ್ ರಾಯರೆಡ್ಡಿ : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2006–07ನೇ ಸಾಲಿನಲ್ಲಿ ರಾಜ್ಯದಲ್ಲಿನ ಸರ್ಕಾರಿ ಹಾಗು ಅನುದಾನಿತ ಅನುದಾನ ರಹಿತ ಪ್ರೌಢಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿನಿಯವರ ಸಂಖ್ಯೆ ;

ಆ) ಈ ಶಾಲೆಗಳಿಗೆ ಕಲಿಯುತ್ತಿರುವ ಎಷ್ಟು ಮಂದಿ ವಿದ್ಯಾರ್ಥಿನಿಯರಿಗೆ ಸರ್ಕಾರವು ಸೈಕಲ್‌ನ್ನು ವಿತರಿಸಿದೆ; ಹಾಗೂ ಯಾವ ಯಾವ ಆಧಾರದ ಮೇಲೆ ವಿದ್ಯಾರ್ಥಿಗಳಿಗೆ ಸೈಕಲ್‌ಗಳನ್ನು ವಿತರಿಸಲಾಗುತ್ತಿದೆ;

ಇ) ಈ ಬೈಸಿಕಲ್‌ಗಳನ್ನು ಯಾವ ಯಾವ ಸಂಸ್ಥೆಗಳಿಂದ ಖರೀದಿಸಲಾಗುತ್ತಿದೆ; ಖರೀದಿಸಲು ಅನುಸರಿಸಲಾಗುವ ಮಾರ್ಗವೇನು;

ಈ) ಈ ಸೈಕಲ್‌ಗಳ ಗುಣಮಟ್ಟವನ್ನು ಯಾವ ರೀತಿ ಪರೀಕ್ಷಿಸಲಾಗುತ್ತಿದೆ; ಪ್ರತಿ ಸೈಕಲ್‌ಗಳ ಬೆಲೆಯೇನು; ಮತ್ತು ಯಾವ ಮಾಡಲ್ ಗಳನ್ನು ವಿತರಿಸಲಾಗುತ್ತಿದೆ;

ಉ) ಈ ಸೈಕಲ್‌ಗಳನ್ನು ಖರೀದಿಸಲು ಯಾವ ಯಾವ ಇಲಾಖೆಯಿಂದ ಎಷ್ಟೆಷ್ಟು ಅನುದಾನವನ್ನು ಬಳಸಿಕೊಳ್ಳಲಾಗಿದೆ?

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು :

ಅ) 2006–07ನೇ ಸಾಲಿನಲ್ಲಿ ಸರ್ಕಾರಿ ಪ್ರೌಢ ಶಾಲೆಗಳಲ್ಲಿ 4,58,794 ಅನುದಾನಿತ ಪ್ರೌಢ ಶಾಲೆಗಳಲ್ಲಿ 3,43,940 ಮತ್ತು ಅನುದಾನ ರಹಿತ ಪ್ರೌಢ ಶಾಲೆಗಳಲ್ಲಿ 2,06,653 ವಿದ್ಯಾರ್ಥಿನಿಯರು ದಾಖಲಾಗಿರುತ್ತಾರೆ.

ಆ) ಬಡತನ ರೇಖೆಗಿಂತ ಕೆಳಗೆ ಇರುವ ಕುಟುಂಬಗಳಿಗೆ (ಬಿ.ಪಿ.ಎಲ್) ಸೇರಿದ 8ನೇ ತರಗತಿಯಲ್ಲಿ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ 1,75,023 ಬಾಲಕಿಯರಿಗೆ ಉಚಿತ ಬೈಸಿಕಲ್ ಗಳನ್ನು ವಿತರಿಸಲಾಗಿದೆ. ಇದೇ ವರ್ಗದ ಬಾಲಕರಿಗೂ ಉಚಿತ ಸೈಕಲ್ ವಿತರಣೆ ಪ್ರಾರಂಭವಾಗಿದೆ.

ಇ) (1) ಮೆ: ಟಿ.ಐ. ಸೈಕಲ್ಸ್ ಲಿಮಿಟೆಡ್, ಅಂಬತ್ತೂರು, ಚೆನ್ನೈ, (2) ಮೆ:ಹಿರೋ ಸೈಕಲ್ಸ್ ಲಿಮಿಟೆಡ್, ಲೂಧಿಯಾನ, (3) ಮೆ: ಅಟ್ಲಾಸ್ ಸೈಕಲ್ಸ್ (ಹರಿಯಾಣ) ಲಿಮಿಟೆಡ್, (4) ಮೆ: ಏವನ್ ಸೈಕಲ್ಸ್ ಲಿಮಿಟೆಡ್ ಲೂಧಿಯಾನ ಈ ನಾಲ್ಕು ಸಂಸ್ಥೆಗಳಿಂದ ಬೈಸಿಕಲ್‌ಗಳನ್ನು ಕರ್ನಾಟಕ ಪಾರದರ್ಶಕ ಅಧಿನಿಯಮ 2000 ರಲ್ಲಿನ ನಿಯಮವನ್ನು ಅನುಸರಿಸಿ ಟೆಂಡರ್ ಕರೆಯುವ ಮೂಲಕ ಖರೀದಿ ಮಾಡಲಾಗಿದೆ.

ಈ) ಖರೀದಿ ಮಾಡಿರುವ ಸೈಕಲ್‌ಗಳ ಗುಣಮಟ್ಟವನ್ನು ರಿಸರ್ಚ್ ಆಂಡ್ ಡೆವಲಪ್ ಮೆಂಟ್ ಸೆಂಟರ್ ಫಾರ್ ಬೈಸಿಕಲ್ & ಸೀವಿಂಗ್ ಮೆಷನ್, ಲೂಧಿಯಾನ ಸಂಸ್ಥೆಯವರಿಂದ ಪರೀಕ್ಷೆಗೊಳಪಡಿಸಲಾಗಿದೆ ಹಾಗೂ ಜಿಲ್ಲಾ ಮಟ್ಟದಲ್ಲಿ ಮತ್ತು ತಾಲ್ಲೂಕು ಮಟ್ಟದಲ್ಲಿ (ಶಿಕ್ಷಣ ಇಲಾಖೆಯಿಂದ ಇಬ್ಬರು ಮತ್ತು ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯಿಂದ ಇಬ್ಬರು) ತಾಂತ್ರಿಕ ಸಮಿತಿಗಳನ್ನು ರಚಿಸಿ ವಿಷ್ಯುಯಲ್ ತಪಾಸಣೆ ಮಾಡಲು ತರಬೇತಿಯನ್ನು ಸಹ ನೀಡಲಾಗಿದೆ. ಪ್ರತಿ ಸೈಕಲ್‌ನ ಬೆಲೆ ರೂ. 2030 ಕ್ಕೆ ಇರುತ್ತದೆ. ಬೈಸಿಕಲ್ ಮಾಡಲ್ IS 10613–2004 ಆಗಿರುತ್ತದೆ.

ಉ) ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಿಂದ ರೂ. 25 ಕೋಟಿ ಮತ್ತು ಶಿಕ್ಷಣ ಇಲಾಖೆಯಿಂದ ರೂ. 10.74 ಕೋಟಿಯನ್ನು ಸರ್ಕಾರ ಬಿಡುಗಡೆ ಮಾಡಿದೆ.

447 ಶ್ರೀ ಅಮರೇಗೌಡ ಪಾಟೀಲ್ ಬಯ್ಯಾಪುರ : ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಲಿಂಗಸುಗೂರು ತಾಲ್ಲೂಕಿನ ಚಿಕ್ಕುಪ್ಪೇರಿ ಹಾಗೂ ಸುಣಕಲ್ ಗ್ರಾಮಗಳು ಕೃಷ್ಣಾ ಮೇಲ್ದಂಡೆ ಯೋಜನೆಯ ಹಿನ್ನೀರಿನಿಂದ ಮುಳುಗಡೆಯಾಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಬಂದಿದ್ದಲ್ಲಿ ಈ ಗ್ರಾಮಗಳ ಸ್ಥಳಾಂತರಕ್ಕೆ ಸರ್ಕಾರ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆಯೆ;

ಇ) ಹಾಗಿದ್ದಲ್ಲಿ ಆ ಕ್ರಮ ಈಗ ಯಾವ ಹಂತದಲ್ಲಿದೆ;

ಈ) ಸದರಿ ಗ್ರಾಮಗಳ ಸ್ಥಳಾಂತರದ ಯೋಜನೆಗೆ ತಗಲುವ ಅಂದಾಜು ವೆಚ್ಚವೆಷ್ಟು?

ಶ್ರೀ ಕೆ.ಎಸ್. ಈಶ್ವರಪ್ಪ (ಜಲಸಂಪನ್ಮೂಲ ಸಚಿವರು) :

ಅ) ಲಿಂಗಸುಗೂರು ತಾಲ್ಲೂಕಿನ ಚಿಕ್ಕುಪ್ಪೇರಿ ಹಾಗೂ ಸುಣಕಲ್ ಗ್ರಾಮಗಳ ಕೃಷ್ಣಾ ಮೇಲ್ದಂಡೆ ಯೋಜನೆಯ ಹಿನ್ನೀರಿನಿಂದ ಮುಳುಗಡೆಯಾಗುವುದಿಲ್ಲ. ಆದರೆ ನಾರಾಯಣಪುರ ಬಲದಂಡೆ ಕಾಲುವೆ ಅಚ್ಚುಕಟ್ಟು ಪ್ರದೇಶದಲ್ಲಿ ಸದರಿ ಗ್ರಾಮಗಳು ಕೆಳಮಟ್ಟದಲ್ಲಿರುವುದರಿಂದ ಬಿಸಿನೀರಿನಿಂದ ಬಾಧಿತವಾಗಿರುತ್ತದೆ..

ಆ) ಇ) ಮತ್ತು ಉ) ಸದರಿ ಗ್ರಾಮಗಳ ಸ್ಥಳಾಂತರಕ್ಕಾಗಿ ರೂ. 6.09 ಕೋಟಿ ಮೊತ್ತದ ಪ್ರಸ್ತಾವನೆಯನ್ನು ಕೃಷ್ಣಾ ಭಾಗ್ಯ ಜಲ ನಿಗಮದಿಂದ ಸರ್ಕಾರಕ್ಕೆ ದಿ:16/12/2005 ರಂದು ಸಲ್ಲಿಸಲಾಗಿತ್ತು. ಜಲ ಸಂಪನ್ಮೂಲ ಇಲಾಖೆಯಲ್ಲಿ